

بِسْمِ اللّٰہِ الرَّحْمٰنِ الرَّحِیْمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **24-08-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಆಸಿಮ್ ಬಿನ್ ಸಾಬಿತ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಬ್ಬ ಸಹಾಬಿ ಆಗಿದ್ದರು. ಅವರ ಪಿತ ಸಾಬಿತ್ ಬಿನ್ ಖೈಸ್ ಮತ್ತು ಮಾತೆ ಶಮೂಸ್ ಬಿನ್ತ್ ಅಬೂ ಆಮಿರ್ ಆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಆಸಿಮ್ ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಉಹುದ್ ಯುದ್ಧದ ಸಂದರ್ಭದಲ್ಲಿ ಅವಿಶ್ವಾಸಿಗಳು ಅಚಾನಕವಾಗಿ ತೀವ್ರ ಆಕ್ರಮಣ ಮಾಡಿದಾಗ, ಮುಸ್ಲಿಮರು ಚಲ್ಲಾಪಿಲ್ಲಿಯಾಗಿ ಚದುರಿ ಹೋದಾಗ, ಹಝ್ರತ್ ಆಸಿಮ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಸ್ಥಿರವಾಗಿ ನಿಂತಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಜೀವಾರ್ಪಣೆಯ ಬೈಅತ್ ಮಾಡಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೆಸರಿಸಿದ ನಿಷ್ಣಾತರಾದ ಬಾಣ ಹೂಡುವವರಲ್ಲಿ ಅವರೂ ಒಬ್ಬರಾಗಿದ್ದರು. ಅವರು ಔಸ್ ಗೋತ್ರದವರಾಗಿದ್ದರು. ಅವರು ಬದರ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಬದರ್ ಯುದ್ಧ ಪ್ರಾರಂಭವಾಗಲಿರುವ ದಿನದಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಕೇಳಿದರು: ಶತ್ರುಗಳು ನಿಮ್ಮನ್ನು ಎದುರಿಸುತ್ತಾ ನಿಮ್ಮ ಸಮೀಪಕ್ಕೆ ತಲಪಿದರೆ ನೀವು ಅವರೊಡನೆ ಯಾವ ರೀತಿ ಹೋರಾಡುವಿರಿ? ಆಗ ಹಝ್ರತ್ ಹಾಸಿಮ್ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ಶತ್ರು ಸೈನಿಕರು ನಮ್ಮ ಬಾಣ ತಲಪುವಷ್ಟು ದೂರದಲ್ಲಿದ್ದರೆ ನಾವು ಅವರ ಮೇಲೆ ಬಾಣದ ಸುರಿಮಳೆ ಸುರಿಸುವೆವು. ಶತ್ರುಗಳು, ನಾವು ಎಸೆಯುವ ಕಲ್ಲುಗಳು ಅವರಿಗೆ ಬಡಿಯುವಷ್ಟು ದೂರದಲ್ಲಿದ್ದರೆ ನಾವು ಅವರ ಮೇಲೆ ಕಲ್ಲುಗಳನ್ನು ಎಸೆಯುವೆವು. ನಮ್ಮ ಈಟಿಗಳು ಅವರನ್ನು ತಲಪುವಷ್ಟು ದೂರದಲ್ಲಿ ಶತ್ರುಗಳಿದ್ದರೆ ನಾವು ಅವರೊಂದಿಗೆ ಈಟಿಗಳ ಯುದ್ಧ ಮಾಡುವೆವು. ನಮ್ಮ ಈಟಿಗಳು ಸಹ ಮುರಿದು ಹೋದರೆ ನಾವು ಖಡ್ಗ ಬಳಸಿ ಶತ್ರುಗಳನ್ನು ಸಂಹರಿಸುವೆವು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇದೇ ರೀತಿ ಯುದ್ಧವನ್ನು ಮಾಡಲಾಗುತ್ತದೆ. ಅನಂತರ ಹೇಳಿದರು: ಯುದ್ಧ ಮಾಡುವಾಗ ಆಸಿಮ್ ವಿವರಿಸಿದ ರೀತಿಯಲ್ಲಿ ಯುದ್ಧ ಮಾಡಬೇಕು.

ಒಂದು ವರದಿ ಹೀಗಿದೆ: ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಉಹುದ್ ಯುದ್ಧದ ದಿನ ತನ್ನ ಖಡ್ಗದೊಂದಿಗೆ ಮರಳಿ ಬಂದಾಗ ಬಹಳ ಹೆಚ್ಚು ಸಾರಿ ಖಡ್ಗ ಪ್ರಹಾರ ನಡೆಸಿದ ಕಾರಣ ಖಡ್ಗ ಮೊಂಡಾಗಿತ್ತು. ಹಝ್ರತ್ ಅಲಿಯವರು ಹಝ್ರತ್ ಫಾತಿಮರೊಂದಿಗೆ ಹೇಳಿದರು: ಈ ಪ್ರಶಂಸಾರ್ಹ ಖಡ್ಗವನ್ನು ತೆಗೆದಿರಿಸು. ಇದು ರಣಾಂಗಣದಲ್ಲಿ ಬಹಳ ಪ್ರಯೋಜನಕರವಾಗಿತ್ತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಈ ದಿನ ಯಶಸ್ವಿಯಾಗಿ ಖಡ್ಗ ಪ್ರಹಾರ ಮಾಡಿರುವಿರಾದರೆ, ಸಹ್‌ಲ್ ಬಿನ್ ಹನೀಫ್, ಅಬೂ ದಜಾನ, ಆಸಿಮ್ ಬಿನ್ ಸಾಬಿತ್ ಮತ್ತು ಹಾರಿಸ್ ಬಿನ್ ಸಮ ಸಹ ಖಡ್ಗ ಪ್ರಹಾರದಲ್ಲಿ ತಮ್ಮ ನೈಪುಣ್ಯತೆಯನ್ನು ತೋರಿಸಿದ್ದರು.

ಹಿಜರಿ 4ನೇ ವರ್ಷ ಸಫರ್ ತಿಂಗಳಲ್ಲಿ ಅಝಲ್ ಮತ್ತು ಖಾರ ಗೋತ್ರಗಳ ಕೆಲವು ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದು ವಿನಂತಿಸಿದರು: ನಮ್ಮ ಗೋತ್ರಗಳ ಬಹಳ ಜನರು ಇಸ್ಲಾಮಿನ ಕಡೆಗೆ ಒಲವುಳ್ಳವರಾಗಿದ್ದಾರೆ. ತಾವು ಕೆಲವು ಜನರನ್ನು ನಮ್ಮೊಂದಿಗೆ ಕಳುಹಿಸಿರಿ. ಅವರು ನಮ್ಮನ್ನು ಮುಸ್ಲಿಮರನ್ನಾಗಿ ಪರಿವರ್ತಿಸಲಿ ಮತ್ತು ಇಸ್ಲಾಮ್ ಧರ್ಮ ತತ್ವಗಳನ್ನು ನಮಗೆ ಕಲಿಸಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಸಿಮ್ ಬಿನ್ ಸಾಬಿತರ ನೇತೃತ್ವದಲ್ಲಿ ಹತ್ತು ಸಹಾಬರನ್ನು ಅವರ ಜೊತೆಗೆ ಕಳುಹಿಸಿದರು. ಆದರೆ ವಾಸ್ತವದಲ್ಲಿ ಗೋತ್ರಗಳ ಆ ಜನರು ಸುಳ್ಳುಗಾರರಾಗಿದ್ದರು. ಬನೂ ಲಹ್‌ಯಾನ್ ಗೋತ್ರದವರ ಪ್ರೇರೇಪಣೆ ಪ್ರಕಾರ ಅವರು ಮದೀನಕ್ಕೆ ಆಗಮಿಸಿದ್ದರು. ಬನೂ ಲಹ್‌ಯಾನ್ ಗೋತ್ರದವರು ತಮ್ಮ ನಾಯಕ ಸುಫ್‌ಯಾನ್ ಬಿನ್ ಖಾಲಿದನ ಹತ್ಯೆಗೆ ಪ್ರತೀಕಾರ ಮಾಡಲು ಆ ರೀತಿ ಗೂಢ ತಂತ್ರ ರಚಿಸಿದ್ದರು. ಮುಸ್ಲಿಮರು ಮದೀನದ ಹೊರಗೆ ಬಂದಾಗ ಅವರನ್ನು ಹತ್ಯೆ ಮಾಡಲು ಉದ್ದೇಶಿಸಿದ್ದರು. ಅದಕ್ಕಾಗಿ ಅಝಲ್ ಮತ್ತು ಖಾರ ಗೋತ್ರದ ಜನರಿಗೆ ಅನೇಕ ಒಂಟೆಗಳನ್ನು ನೀಡುವುದಾಗಿ ಬನೂ ಲಹ್‌ಯಾನ್ ಗೋತ್ರದವರು ವಾಗ್ದಾನ ಮಾಡಿದ್ದರು. ಅಝಲ್ ಮತ್ತು ಖಾರದ ವಂಚಕರಾದ ಈ ಜನರು ಅಸ್‌ಫಾನ್ ಮತ್ತು ಮಕ್ಕದ ಮಧ್ಯವಿರುವ ಪ್ರದೇಶಕ್ಕೆ ತಲಪಿದಾಗ ಬನೂ ಲಹ್‌ಯಾನ್‌ರಿಗೆ ರಹಸ್ಯವಾಗಿ ತಿಳಿಸಿದರು– ಮುಸ್ಲಿಮರು ನಮ್ಮ ಜೊತೆ ಬರುತ್ತಿದ್ದಾರೆ, ಅವರನ್ನು ಹತ್ಯೆ ಮಾಡಲು ಬನ್ನಿರಿ ಎಂದು. ಆಗ ಬನೂ ಲಹ್‌ಯಾನ್ ಗೋತ್ರದ ನೂರು ನಿಷ್ಣಾತ ಬಿಲ್ಲುಗಾರರ ಸಮೇತ ಇನ್ನೂರು ಯುವಕರು ಮುಸ್ಲಿಮರನ್ನು ಬೆನ್ನಟ್ಟಲು ಹೊರಟು ರಜೀಅ್ ಎಂಬಲ್ಲಿ ಅವರನ್ನು ಹಿಡಿಗೂಡಿದರು. ಹಝ್ರತ್ ಆಸಿಮ್ ಮತ್ತು ಜೊತೆಗಾರರು ಅವರೊಡನೆ ಹೋರಾಡುತ್ತಾ ಶಹೀದರಾದರು. ಖುರೈಶ್ ಗೋತ್ರದವರಿಗೆ ಹಝ್ರತ್ ಆಸಿಮ್ ಶಹೀದರಾದ ಸಮಾಚಾರ ದೊರೆತಾಗ ಅವರು ಕೆಲವು ವಿಶಿಷ್ಟ ಜನರನ್ನು ರಜೀಅ್ ಕಡೆಗೆ ಕಳುಹಿಸುತ್ತಾ ಹೇಳಿದರು, ಆಸಿಮರ ತಲೆಯನ್ನು ಅಥವಾ ಬೇರೆ

ಯಾವುದಾದರೂ ಅಂಗವನ್ನು ಕಡಿದು ತನ್ನಿರಿ ಎಂದು. ಆ ಮೂಲಕ ಹಝ್ರತ್ ಆಸಿಮ್ ಬದರ್ ಯುದ್ಧದಲ್ಲಿ ಹತ್ಯೆ ಮಾಡಿದ ಅವರ ಗೋತ್ರದ ಒಬ್ಬ ದೊಡ್ಡ ನಾಯಕನ ಹತ್ಯೆಗೆ ಪ್ರತೀಕಾರ ಮಾಡಿ ಸಮಾಧಾನ ಪಡೆಯಲು ಇಚ್ಛಿಸಿದ್ದರು. ಆದರೆ ಜೇನುನೊಣಗಳ ಹಿಂಡು ಹಝ್ರತ್ ಆಸಿಮರ ಮೃತದೇಹವನ್ನು ಸಂರಕ್ಷಿಸಿತು. ಆ ಜನರಿಗೆ ತಮ್ಮ ಕೆಟ್ಟ ನಿರ್ಧಾರವನ್ನು ಈಡೇರಿಸಲು ಸಾಧ್ಯವಾಗಲಿಲ್ಲ.

ಒಂದು ವರದಿ ಹೀಗಿದೆ: ಹಝ್ರತ್ ಆಸಿಮ್ ಶತ್ರುಗಳ ವಿರುದ್ಧ ಬಾಣ ಹೂಡುತ್ತಾ ಇದ್ದರು ಮತ್ತು ಆಗ ಒಂದು ಪದ್ಯ ಹಾಡುತ್ತಿದ್ದರು: ಅದರ ಭಾಷಾಂತರ ಹೀಗಿದೆ – 'ಮೃತ್ಯು ಸತ್ಯವಾಗಿಯೂ ಸಂಭವಿಸುವುದಾಗಿದೆ. ಇಹಲೋಕ ಜೀವಿತ ನಿರುಪಯೋಗಿ ಆಗಿದೆ. ಅಲ್ಲಾಹನು ಒಬ್ಬ ಮನುಷ್ಯನ ಬಗ್ಗೆ ಏನು ನಿರ್ಧಾರ ಮಾಡುತ್ತಾನೋ ಅದು ಸಂಭವಿಸಲಿದೆ. ಮನುಷ್ಯನು ಸಹ ಆ ನಿರ್ಧಾರವನ್ನು ಅಂಗೀಕರಿಸಲೇ ಬೇಕಾಗಿದೆ.' ಹಝ್ರತ್ ಆಸಿಮ್ ಹೋರಾಡುತ್ತಾ ಇದ್ದಾಗ ಬಾಣಗಳು ಮುಗಿದಾಗ ಈಟಿಯನ್ನು ಬಳಸಿ ಹೋರಾಡಿದರು. ಈಟಿ ಸಹ ಮುರಿದು ಹೋದಾಗ ಖಡ್ಗ ಹಿಡಿದು ಹೋರಾಡುತ್ತಾ ಕೊನೆಗೆ ಜೀವಾರ್ಪಣೆ ಮಾಡಿದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಸಹ್ಲ್ ಬಿನ್ ಹನೀಫ್ ಅನ್ಸಾರಿ. ಅವರ ಪಿತ ಹನೀಫ್ ಮತ್ತು ಮಾತೆ ಹಿಂದ್ ಬಿನ್ತ್ ರಾಫಿಅ್. ಅವರಿಗೆ ತಾಯಿಯ ಕಡೆಯಿಂದ ಅಬ್ದುಲ್ಲ ಮತ್ತು ನುಅ್ಮಾನ್ ಎಂಬ ಇಬ್ಬರು ಸಹೋದರರಿದ್ದರು. ಅಸದ್ ಉಸ್ಮಾನ್ ಮತ್ತು ಸಅದ್ ಹಝ್ರತ್ ಸಹ್ಲ್‌ರ ಪುತ್ರರಾಗಿದ್ದರು. ಅವರ ಪುತ್ರರು ಮದೀನದಲ್ಲಿಯೂ ಬಗ್‌ದಾದ್‌ನಲ್ಲಿಯೂ ವಾಸಿಸುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಹ್ಲ್ ಮತ್ತು ಹಝ್ರತ್ ಅಲಿ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಬದರ್ ಯುದ್ಧ ಸಮೇತ ಎಲ್ಲ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು. ಅವರು ಉನ್ನತ ಪದವಿಯನ್ನು ಗಳಿಸಿದ ಸಹಾಬಿ ಆಗಿದ್ದರು. ಆದರೆ ಅವರ ಸಾಂಪತ್ತಿಕ ಸ್ಥಿತಿ ಬಲಿಷ್ಠವಾಗಿರಲಿಲ್ಲ. ಇಬ್ನು ಅಈನ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ನಝೀರ್ ಗೋತ್ರದವರಿಂದ ವಶಪಡಿಸಿಕೊಂಡ ಸಂಪತ್ತಿನ ಪಾಲನ್ನು ಅನ್ಸಾರ್‌ಗಳ ಪೈಕಿ ಹಝ್ರತ್ ಸಹ್ಲ್ ಮತ್ತು ಹಝ್ರತ್ ಅಬೂ ದಜಾನ್ ಹೊರತು ಬೇರೆ ಅನ್ಸಾರ್‌ಗಳಿಗೆ ನೀಡಿರಲಿಲ್ಲ. ಏಕೆಂದರೆ ಅವರಿಬ್ಬರೂ ಬರಿಗೈಯ್ಯನ್ನು ಹೊಂದಿದವರಾಗಿದ್ದರು.

ಹಝ್ರತ್ ಸಹ್ಲ್‌ರವರು ಉಹುದ್ ಯುದ್ಧದ ಕಾಲದಲ್ಲಿ ಸ್ಥಿರವಾಗಿ ನಿಂತು ಹೋರಾಡಿದ ಮಹಾನ್ ಸಹಾಬರಲ್ಲಿ ಒಬ್ಬರಾಗಿದ್ದರು. ಆ ದಿನ ಅವರು ಮೃತ್ಯು ತನಕ ಹೋರಾಡುವ ಪ್ರತಿಜ್ಞೆಯ ಬೈಅತ್ ಮಾಡಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಗುರಾಣಿಯ ಹಾಗೆ ಸ್ಥಿರವಾಗಿ ನಿಂತಿದ್ದರು. ಆಗ ಶತ್ರುಗಳ ತೀವ್ರ ಆಕ್ರಮಣದ ಕಾರಣದಿಂದ ಮುಸ್ಲಿಮರು ಚದುರಿ ಹೋಗಿದ್ದರು. ಮತ್ತು ಶತ್ರುಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಡೆಗೆ ಬಾಣ ಹೂಡುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು, **ನಬ್‌ಲವ್ರು ಸಹ್‌ಲನ್ ಫ ಇನ್ನಹು ಸಹ್‌ಲ್ –** ಸಹ್‌ಲ್‌ರ ಕೈಯಲ್ಲಿ ಬಾಣ ನೀಡಿರಿ. ಏಕೆಂದರೆ ಬಾಣ ಹೂಡುವುದು ಅವರಿಗೆ ಸುಲಭವಾದ ಕೆಲಸವಾಗಿದೆ. ಬನೂ ನಝೀರ್ ಗೋತ್ರದವರನ್ನು ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಈಟಿ ಚಲಾಯಿಸುವುದರಲ್ಲಿ ನಿಷ್ಣಾತನಾಗಿದ್ದ ಗಝ್ವಲ್ ಎಂಬ ಒಬ್ಬ ಯಹೂದಿ, ಅವರ ಒಂದು ಗುಂಪಿನೊಂದಿಗೆ ಮುಸ್ಲಿಮರನ್ನು ಹತ್ಯೆ ಮಾಡುವ ಇರಾದೆಯಿಂದ ಹೊರಟಿದ್ದನು. ಹಝ್ರತ್ ಅಲಿ ಅವನನ್ನು ಕೊಂದರು. ಆಗ ಅವನೊಂದಿಗೆ ಇದ್ದವರು ಓಡಿ ಹೋದರು. ಅವರನ್ನು ಹಿಡಿಗೂಡಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿಯವರ ನೇತೃತ್ವದಲ್ಲಿ ಹತ್ತು ಜನರನ್ನು ನಿಯೋಜಿಸಿದರು. ಓಡಿಹೋದ ಆ ಜನರನ್ನು ಬೆನ್ನಟ್ಟಿ ಕೊಂದು ಹಾಕಲಾಯಿತು. ಏಕೆಂದರೆ ಆ ಜನರು ಯುದ್ಧ ಮಾಡಲು ಹಾಗೂ ಹೊಂಚು ಹಾಕಿ ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಹೊರಟವರಾಗಿದ್ದರು. ಮುಸ್ಲಿಮರ ತಂಡದಲ್ಲಿ ಹಝ್ರತ್ ಅಲಿಯವರ ಜೊತೆಗೆ ಹಝ್ರತ್ ಅಬೂ ದಜಾನ ಮತ್ತು ಹಝ್ರತ್ ಸಹ್ಲ್ ಬಿನ್ ಹನೀಫ್ ಸಹ ಇದ್ದರು. ಖೈಬರನ್ನು ಜಯಿಸಿದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೈನ್ಯ ವಾದಿಯುಲ್ ಖುರಾದಲ್ಲಿ ಇಳಿದಾಗ ಯಹೂದಿಯರು ಆಗಲೇ ಅಲ್ಲಿ ಯುದ್ಧ ಸನ್ನದ್ಧರಾಗಿ ಜಮಾಯಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಕ್ಷಣ ಸೈನ್ಯ ಸಾಲುಗಟ್ಟಿ ನಿಂತುಕೊಳ್ಳಲು ಆಜ್ಞಾಪಿಸಿದರು. ಹಝ್ರತ್ ಸಅದ್ ಬಿನ್ ಉಬಾದರ ಕೈಯಲ್ಲಿ ಲಾಂಛನ ನೀಡಲಾಯಿತು. ಹಝ್ರತ್ ಖುಬಾಬ್ ಬಿನ್ ಮುಂಝಿರ್, ಹಝ್ರತ್ ಸಹ್ಲ್ ಬಿನ್ ಹನೀಫ, ಹಝ್ರತ್ ಉಬಾದ್ ಬಿನ್ ಬಶೀರ್‌ರಿಗೆ ಒಂದೊಂದು ಪತಾಕೆ ನೀಡಲಾಯಿತು. ಈ ಯುದ್ಧದ ಪರಿಣಾಮವಾಗಿ ಆ ಪ್ರದೇಶವೆಲ್ಲಾ ಮುಸ್ಲಿಮರ ಅಧೀನಕ್ಕೊಳಪಟ್ಟಿತು.

ಹಝ್ರತ್ ಸಹ್ಲ್ ಬಿನ್ ಹನೀಫ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಂದಿಗೆ ಹೇಳಿದರು: ನೀವು ಮಕ್ಕದವರಿಗೆ ನನ್ನ ಸಂದೇಶವಾಹಕರಾಗಿದ್ದೀರಿ. ನೀವು ಅಲ್ಲಿಗೆ ಹೋಗಿ ನನ್ನ ಸಂದೇಶ ತಲಪಿಸಿ ಹೇಳಬೇಕು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಮಗೆ ಮೂರು ಸಂಗತಿಗಳನ್ನು ಆಜ್ಞಾಪಿಸಿದ್ದಾರೆ: ನೀವು ನಿಮ್ಮ ತಂದೆ ತಾತಂದಿರ ಹೆಸರಿನಲ್ಲಿ ಆಣೆ ಹಾಕಬೇಡಿರಿ. ನೀವು ಮಲ ವಿಸರ್ಜನೆ ಮಾಡಲು ಕುಳಿತಾಗ ನಿಮ್ಮ ಮುಖವನ್ನಾಗಲಿ ಬೆನ್ನನ್ನಾಗಲಿ ಕಅಬದ ಕಡೆಗಿರಿಸಬೇಡಿರಿ. ಉತ್ತರ ದಕ್ಷಿಣವಾಗಿ ಕುಳಿತುಕೊಳ್ಳಿರಿ. ನೀವು ಎಲುಬಿನ ತುಂಡು ಅಥವಾ ಒಣ ಸೆಗಣಿಯನ್ನು ಮೂತ್ರ ವಿಸರ್ಜನೆಯ ಶುದ್ಧೀಕರಣಕ್ಕಾಗಿ ಬಳಸದಿರಿ.

ಹಝ್ರತ್ ಅಲಿಯವರನ್ನು ಖಲೀಫರಾಗಿ ಬೈಅತ್ ಮಾಡಿದಾಗ ಹಝ್ರತ್ ಸಹ್ಲ್ ಅವರ ಜೊತೆಗಿದ್ದರು. ಹಝ್ರತ್ ಅಲಿ ಬಸ್ರ ನಗರಕ್ಕೆ ಹೋದಾಗ ಹಝ್ರತ್ ಸಹ್ಲ್‌ರನ್ನು ತನ್ನ ಕಾರ್ಯನಿರ್ವಹಿಸಲು ನೇಮಿಸಿದ್ದರು.

ಹಝ್ರತ್ ಸಹ್ಲ್‌ರವರು ಹಝ್ರತ್ ಅಲಿಯವರ ಜೊತೆಗೆ ಸಿಫ್ಫೀನ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಅಲಿಯವರು ಹಝ್ರತ್ ಸಹ್ಲ್‌ರನ್ನು ಪರ್ಶಿಯಾ ದೇಶದ ಗವರ್ನರನ್ನಾಗಿ ನೇಮಿಸಿದ್ದರು. ಸಿಫ್ಫೀನ್ ಯುದ್ಧದಿಂದ ಮರಳಿ ಬರುವಾಗ ಹಿಜರಿ 38ರಲ್ಲಿ ಕೂಫದಲ್ಲಿ ಹಝ್ರತ್ ಸಹ್ಲ್ ಬಿನ್ ಹನೀಫ್ ನಿಧನ ಹೊಂದಿದರು. ಅವರ ಜನಾಝು ನಮಾಝ್ ಹಝ್ರತ್ ಅಲಿ ನಿರ್ವಹಿಸಿದರು. ಹಝ್ರತ್ ಹನ್‌ಶ್ ಬಿನ್ ಮುಅ್‌ತಿರ್ ಹೇಳುತ್ತಾರೆ: ಹಝ್ರತ್ ಸಹ್ಲ್ ಬಿನ್ ಹನೀಫ್ ನಿಧನ ಹೊಂದಿದಾಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಜನಾಝು ನಮಾಝ್ ನಿರ್ವಹಿಸುವಾಗ ಆರು ಸಾರಿ ತಕ್‌ಬೀರ್ ವಚನಗಳನ್ನು ಉಚ್ಚರಿಸಿದರು. ಆಗ ಕೆಲವು ಜನರು ಅದರ ಬಗ್ಗೆ ಅತೃಪ್ತಿ ಪ್ರಕಟಿಸಿದರು. ಆಗ ಹಝ್ರತ್ ಅಲಿ ಜನರೊಂದಿಗೆ ಹೇಳಿದರು: ಹಝ್ರತ್ ಸಹ್ಲ್ ಬದರೀ ಸಹಾಬಿಯಾಗಿದ್ದಾರೆ ಎಂದು. ಜಬಾನ ಎಂಬಲ್ಲಿಗೆ ಜನಾಝು ತಲಪಿದಾಗ, ಹಝ್ರತ್ ಖರ್‌ಝು ಬಿನ್ ಕಅಬ್ ತನ್ನ ಕೆಲವು ಸಂಗಡಿಗರೊಂದಿಗೆ ಬಂದು ಹಝ್ರತ್ ಅಲಿಯವರೊಂದಿಗೆ ವಿನಂತಿಸಿದರು: 'ಓ ಅಮೀರುಲ್ ಮೂಮಿನೀನ್, ಸಹ್ಲ್‌ರ ಜನಾಝು ನಮಾಝ್‌ನಲ್ಲಿ ಸೇರಲು ನಮಗೆ ಸಾಧ್ಯವಾಗಲಿಲ್ಲ' ಎಂದು. ಆಗ ಹಝ್ರತ್ ಅಲಿಯವರು ಅವರಿಗೆ ಸಹ್ಲ್‌ರ ಜನಾಝು ನಮಾಝ್ ನಿರ್ವಹಿಸಲು ಅನುಮತಿ ನೀಡಿದರು. ಹಝ್ರತ್ ಖರ್‌ಝುರ ನೇತೃತ್ವದಲ್ಲಿ ಅವರ ಸಂಗಡಿಗರು ಜನಾಝು ನಮಾಝ್ ನಿರ್ವಹಿಸಿದರು.

ನಾನು ಪ್ರಸ್ತಾಪಿಸಲಿರುವ ಮೂರನೆಯ ಸಹಾಬಿ ಹಝ್ರತ್ ಜಬ್ಬಾರ್ ಬಿನ್ ಸಖ್ರ್ ಆಗಿದ್ದಾರೆ. ಅವರು ಸಖ್ರ್ ಬಿನ್ ಉಮಯ್ಯರ ಪುತ್ರರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬೈಅತ್ ಅಖಬ ಸಾನಿಯದ ಸಂದರ್ಭದಲ್ಲಿ ಬೈಅತ್ ಮಾಡಿದ ಎಪ್ಪತ್ತು ಅನ್‌ಸಾರ್‌ಗಳಲ್ಲಿ ಹಝ್ರತ್ ಜಬ್ಬಾರ್ ಸೇರಿದ್ದರು. ಹಝ್ರತ್ ಮಿಖ್‌ದಾದ್ ಬಿನ್ ಅಮರ್ ಮತ್ತು ಹಝ್ರತ್ ಜಬ್ಬಾರ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ್ದರು. ಬದರ್ ಯುದ್ಧದ ಸಮಯದಲ್ಲಿ ಹಝ್ರತ್ ಜಬ್ಬಾರರ ಪ್ರಾಯ 32 ಆಗಿತ್ತು. ಖೈಬರ್ ಮೊದಲಾದ ಪ್ರದೇಶಗಳಲ್ಲಿರುವ ಖರ್ಜೂರದ ಮರಗಳ ಹಣ್ಣುಗಳ ಫಸಲನ್ನು ಅಂದಾಜು ಮಾಡಲು ಹಝ್ರತ್ ಜಬ್ಬಾರರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸುತ್ತಿದ್ದರು. ಹಝ್ರತ್ ಉಸ್ಮಾನ್‌ರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ 30ರಲ್ಲಿ ಮದೀನದಲ್ಲಿ ಹಝ್ರತ್ ಜಬ್ಬಾರ್ ನಿಧನ ಹೊಂದಿದರು. ಮೃತರಾಗುವಾಗ ಅವರ ಪ್ರಾಯ 62 ಆಗಿತ್ತು. ಅವರು ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಯುದ್ಧದ ಸಂದರ್ಭದಲ್ಲಿ ಹೀಗೆ ಪ್ರಾರ್ಥಿಸಿದ್ದರು: **ಅಲ್ಲಾಹುಮ್ಮ ಅಕ್‌ಫಿನೀ ನೌಫಲಬ್ನ ಖುವೈಲಿದ್ –** ಮಕ್ಕದ ಬಹುದೇವಾರಾಧಕ ಖುರೈಶಿಗಳ ಒಬ್ಬ ಮುಖಂಡನಾದ ನೌಫಲನನ್ನು ನನ್ನ ಸ್ವಾಧೀನಕ್ಕೊಳಪಡಿಸು. ಹೀಗೆ ವರದಿಯಾಗಿದೆ, ಹಝ್ರತ್ ಜಬ್ಬಾರ್ ಬಿನ್ ಸಖ್ರ್‌ರವರು ನೌಫಲನನ್ನು ಬಂಧಿಸಿದ್ದರು. ಆಗ ಹಝ್ರತ್ ಅಲಿ ಅವನ ಬಳಿಗೆ ಹೋಗಿ ಅವನನ್ನು ಕೊಂದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿಚಾರಿಸಿದರು: ನೌಫಲನ ಬಗ್ಗೆ ಯಾರಿಗಾದರೂ ಏನಾದರೂ ತಿಳಿದಿದೆಯೋ? ಹಝ್ರತ್ ಅಲಿ ಆಗ ಹೇಳಿದರು: ನಾನು ಅವನನ್ನು ಕೊಂದು ಹಾಕಿದೆ ಎಂದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದರು– ಸರ್ವಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು. ಅವನು ನನ್ನ ಪ್ರಾರ್ಥನೆಯನ್ನು ಅಂಗೀಕರಿಸಿದನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜ್‌ರತ್ ಮಾಡಿ ಮದೀನಕ್ಕೆ ತಲಪಿದಾಗ ಪ್ರತಿಯೊಬ್ಬ ಮದೀನ ನಿವಾಸಿ ಮುಸ್ಲಿಮ್ ಆಶಿಸುತ್ತಿದ್ದರು ಅವರು ತಮ್ಮ ಮನೆಯಲ್ಲಿ ವಾಸಿಸಲಿ ಎಂದು. ಇದರ ಬಗ್ಗೆ ಅನೇಕ ವರದಿಗಳಿವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನ್ನ ಒಂಟೆ ಎಲ್ಲಿ ಕುಳಿತುಕೊಳ್ಳುವುದೋ ಅಲ್ಲಿಯೇ ನಾನು ವಾಸಿಸುವೆನು. ಆ ಹೆಣ್ಣು ಒಂಟೆ ಮದೀನದ ರಸ್ತೆಗಳಲ್ಲಿ ಚಲಿಸುತ್ತಾ ಈಗ ಮಸ್‌ಜಿದ್ ನಬವಿಯ ಬಾಗಿಲು ಇರುವಲ್ಲಿಗೆ ತಲಪಿ ಅಲ್ಲಿ ಕುಳಿತುಬಿಟ್ಟಿತು. ಆಗ ಹಝ್ರತ್ ಜಬ್ಬಾರ್ ಬಿನ್ ಸಖ್ರ್, ಒಂಟೆ ಬನೂ ಸಲ್ಮಾ ಬಡಾವಣೆಗೆ ಹೋಗಿ ನಿಂತುಕೊಳ್ಳಲಿ ಎಂದು ಆಶಿಸಿ ಒಂಟೆಯನ್ನು ಎಬ್ಬಿಸಲು ಪ್ರಯತ್ನಿಸಿದರು. ಆದರೆ ಒಂಟೆ ಎದ್ದೇಳಲಿಲ್ಲ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂಟೆ ಮೇಲಿನಿಂದ ಇಳಿದು ಬಂದು ಹೇಳಿದರು: ಇನ್‌ಶಾ ಅಲ್ಲಾಹ್ ಇಲ್ಲಿಯೇ ನಾವು ವಾಸಿಸಲು ತೊಡಗುವೆವು. ಅವರು ಪವಿತ್ರ ಖುರ್‌ಆನಿನ ಈ ವಚನ ಪಠಿಸಿದರು: وَقُل رَّبِّ أَنزِلْنِي مُنزَلًا مُّبَارَكًا وَأَنتَ خَيْرُ الْمُنزِلِينَ **– ವ ಖುಲ್ ರಬ್ಬಿ ಅನ್‌ಝಿಲ್‌ನೀ ಮುನ್‌ಝುಲನ್ ಮುಬಾರಕನ್ ವ ಅನ್‌ತ ಖೈರುಲ್ ಮುನ್‌ಝಿಲೀನ್**. ಹೇಳು, ನನ್ನ ಪ್ರಭೂ, ನೀನು ನನ್ನನ್ನು ಅನುಗ್ರಹೀತವಾದ ಸ್ಥಳದಲ್ಲಿ ದಡ ಸೇರಿಸು. ನೀನು (ಜನರನ್ನು) ಗುರಿಮುಟ್ಟಿಸುವವರಲ್ಲಿ ಅತ್ಯುತ್ತಮನಾಗಿರುವೆ. (23:30). ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಇಲ್ಲಿಗೆ ಅತ್ಯಂತ ಸಮೀಪವಾಗಿ ಯಾರು ವಾಸಿಸುತ್ತಿದ್ದಾರೆ. ಹಝ್ರತ್ ಅಬೂ ಅಯ್ಯೂಬ್ ಅನ್‌ಸಾರಿ ಹೇಳಿದರು: ಎಲ್ಲರಿಗಿಂತ ಸಮೀಪವಿರುವವನು ನಾನೇ. ಇದು ನನ್ನ ಮನೆ. ನನ್ನ ಮನೆ ಬಾಗಿಲು ಅತ್ಯಂತ ಸಮೀಪವಿದೆ. ನೀವು ಒಂಟೆಯ ಮೇಲಿರಿಸಿದ ಆಸನವನ್ನು ಮನೆಯೊಳಗಿರಿಸಿರುವೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: 'ಹೋಗೋಣ, ವಿಶ್ರಾಂತಿ ಪಡೆಯಲು ನಮಗೆ ಸ್ಥಳವೇರ್ಪಡಿಸಿರಿ.' ಹಝ್ರತ್ ಅಬೂ ಅಯ್ಯೂಬ್ ಮನೆಗೆ ಹೋಗಿ ವ್ಯವಸ್ಥೆ ಮಾಡಿದರು.

ಶಅಸ್ ಬಿನ್ ಖೈಸ್ ಎಂಬವನು ಮುಸ್ಲಿಮರ ಕಠಿಣ ಶತ್ರುವಾಗಿದ್ದನು. ಒಂದು ದಿನ ಅವನು ಮಾರ್ಗದಲ್ಲಿ ಹೋಗುವಾಗ ಮುಸ್ಲಿಮರ ಒಂದು ಗುಂಪು ಪರಸ್ಪರ ಪ್ರೀತಿ

ವಾತ್ಸಲ್ಯದಿಂದ ಮಾತನಾಡುತ್ತಾ ಇರುವುದಾಗಿ ಕಂಡನು. ಮುಸ್ಲಿಮರು ಪರಸ್ಪರ ಸೌಹಾರ್ದದಿಂದಿರುವುದನ್ನು ಕಂಡಾಗ ಅವನಿಗೆ ಕೋಪ ಉಕ್ಕಿ ಬಂತು. ಅವನು ಯೋಚಿಸಿದನು, ಬನೂ ಖೀಲ ಗೋತ್ರದ ಪ್ರಮುಖರು ಇಲ್ಲಿ ಪರಸ್ಪರ ಜೊತೆ ಸೇರಿ ಕುಳಿತಿದ್ದಾರೆ. ಈ ಪ್ರಮುಖರು ಪರಸ್ಪರ ಐಕ್ಯದಿಂದ ಜೀವಿಸುತ್ತಿದ್ದರೆ ನಮಗೆ ನೆಮ್ಮದಿ ದೊರಕಲಾರದು. ಶಅಸ್ ತನ್ನ ಜೊತೆಗಿದ್ದ ಒಬ್ಬ ಯಹೂದಿ ತರುಣನನ್ನು ಕರೆದು ಹೇಳಿದನು, ನೀನು ಹೋಗಿ ಮುಸ್ಲಿಮರ ಜೊತೆ ಕುಳಿತುಕೊಂಡು ಬಆಸ್ ಯುದ್ಧ ಮತ್ತು ಅದರ ಮೊದಲಿನ ಘಟನೆಗಳನ್ನು ನಿರೂಪಿಸಿ ಅವರನ್ನು ಚುಡಾಯಿಸಬೇಕು, ಅವರು ಪರಸ್ಪರ ವಿರುದ್ಧ ಹಾಡುತ್ತಿದ್ದ ಹಾಡುಗಳನ್ನು ಹಾಡಿ ಹೇಳಬೇಕು ಎಂದು ಹೇಳಿದನು.

ಆ ತರುಣ ಹಾಗೆಯೇ ಮಾಡಿದಾಗ ಅವನ ಉಪಾಯ ಫಲಿಸಿತು. ಪ್ರೀತಿ ವಾತ್ಸಲ್ಯದಿಂದ ಮಾತನಾಡುತ್ತಾ ಇದ್ದವರು ಈ ಪಿತೂರಿಯಿಂದ ಪರಸ್ಪರ ಕಟುವಾಗಿ ಮಾತನಾಡಲು ತೊಡಗಿದರು. ಅವರಲ್ಲಿ ಇಬ್ಬರು, ಎಂದರೆ ಹಝ್ರತ್ ಔಸ್ ಬಿನ್ ಖೈಝಿ ಮತ್ತು ಹಝ್ರತ್ ಜಬ್ಬಾರ್ ಬಿನ್ ಸಖ್ರ್ ಪರಸ್ಪರ ಜಗಳ ಮಾಡಿದರು. ಒಬ್ಬರು ಇನ್ನೊಬ್ಬರೊಂದಿಗೆ ಹೇಳಿದರು: ನೀವು ಇಚ್ಛಿಸುವುದಾದರೆ ಈಗಲೇ ನಾವು ಯುದ್ಧ ಪ್ರಾರಂಭಿಸುವೆವು ಎಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಜಗಳದ ಸಮಾಚಾರ ತಲಪಿದಾಗ ಅವರು ಔಸ್ ಮತ್ತು ಖಝ್ರಜ್ ಗೋತ್ರದ ಜನರ ಬಳಿಗೆ ಬಂದರು. ಅವರ ಜೊತೆ ಮುಹಾಜಿರ್ (ಮಕ್ಕದ) ಸಹಾಬರು ಸಹ ಇದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಮುಸ್ಲಿಮರೇ ನೀವು ಅಲ್ಲಾಹನಿಗೆ ಭಯಪಡಿರಿ. ಅಲ್ಲಾಹನಿಗೆ ಭಯಪಡಿರಿ. ನೀವು ಈಗ ಸಹ, ನಾನು ನಿಮ್ಮೊಂದಿಗೆ ಇರುವಾಗ, ಅಜ್ಞಾನ ಕಾಲದ ವಾದಗಳನ್ನು ಮಾಡುತ್ತಿರುವಿರೋ. ಅಲ್ಲಾಹನು ನಿಮಗೆ ಇಸ್ಲಾಮಿನ ಕಡೆಗೆ ಮಾರ್ಗದರ್ಶನ ನೀಡಿದ್ದಾನೆ. ಆ ಮೂಲಕ ನಿಮಗೆ ಗೌರವ ನೀಡಿ ನಿಮ್ಮಿಂದ ಅಜ್ಞಾನ ಕಾಲದ ವಿಷಯಗಳನ್ನು ಕೊನೆಗೊಳಿಸಿದ್ದಾನೆ. ಆಗ ಸಹಾಬರಿಗೆ ತಿಳಿಯಿತು ಶತ್ರುಗಳ ಪಿತೂರಿಯ ಕಾರಣದಿಂದ ಶೈತಾನನ ಪಿಸುಗುಟ್ಟುವಿಕೆಗೆ ನಾವು ಪಾತ್ರರಾಗಿದ್ದೇವೆಂದು. ಅವರು ತಮ್ಮ ಆಯುಧಗಳನ್ನು ಎಸೆದುಬಿಟ್ಟು ಅಳಲು ತೊಡಗಿದರು. ಔಸ್ ಮತ್ತು ಖಝ್ರಜ್ ಗೋತ್ರಗಳ ಜನರು ಪರಸ್ಪರ ತಬ್ಬಿಕೊಂಡರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ತಲೆ ತಗ್ಗಿಸಿ ತಮ್ಮ ಅನುಸರಣೆಯನ್ನು ಪ್ರಕಟಿಸುತ್ತಾ ಅಲ್ಲಿಂದ ಹೋದರು. ಹಾಗೆ ಶಅಸ್ ಬಿನ್ ಖೈಸ್ ಬಡಿದೆಬ್ಬಿಸಿದ ಬೆಂಕಿಯನ್ನು ಅಲ್ಲಾಹನು ಕೊನೆಗೊಳಿಸಿದನು.

ಒಟ್ಟಾರೆ ಹೇಳುವುದಾದರೆ ಸಹಾಬರ ಸ್ಥಿತಿ ಆ ರೀತಿ ಇತ್ತು. ಅವರು ಒಮ್ಮೆ ಶೈತಾನನ ಪ್ರಭಾವಕ್ಕೆ ಪಾತ್ರರಾದರೂ ಅವರಿಗೆ ಅದರ ಬಗ್ಗೆ ಪ್ರಜ್ಞೆ ಮೂಡಿಸಿದಾಗ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ನೀವು ಅಜ್ಞಾನದ ಕಾಲಕ್ಕೆ ಏಕೆ ಮರಳಿ ಹೋಗುತ್ತಿರುವಿರಿ ಎಂದು ವಿಚಾರಿಸಿದಾಗ ತಕ್ಷಣ ಅವರಲ್ಲಿ ಪಶ್ಚಾತ್ತಾಪ ತಲೆದೋರಿತು. ಅವರು ಸೌಹಾರ್ದದ ಕಡೆಗೆ ಹೆಜ್ಜೆ ಹಾಕಿದರು. ಅವರು ಪ್ರೀತಿ ಮತ್ತು ಭ್ರಾತೃತ್ವದ ಭಾವನೆಗಳನ್ನು ಪ್ರಕಟಿಸಿದರು. ಇವು ಮಾದರಿಯಾದ ಉದಾಹರಣೆಗಳಾಗಿವೆ. ಈಗ ಕೆಲವು ಜನರು ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ದುರಭಿಮಾನದಿಂದಲೂ ಅಹಂಭಾವದಿಂದಲೂ ವರ್ತಿಸುತ್ತಿದ್ದಾರೆ. ಅಂತಹ ಜನರಿಗೆ ಇದರಲ್ಲಿ ಒಂದು ಮಹತ್ತಾದ ಮಾದರಿಯಿದೆ. ಒಬ್ಬರಿನ್ನೊಬ್ಬರ ರಕ್ತ ಹೀರಲು ಬಯಸುತ್ತಿದ್ದವರು ಮತ್ತು ಯುದ್ಧ ಸನ್ನದ್ಧರಾದವರು ಸಹೋದರ ಭಾವನೆ ಹೊಂದಲು ಸಾಧ್ಯವಾಗುವುದಾದರೆ ಒಂದೇ ಕಲಿಮ ಉಚ್ಚರಿಸುವವರು, ಒಂದೇ ಜಮಾಅತಿನಲ್ಲಿ ಜನಿಸಿದವರು ತಮ್ಮ ಅಹಂಭಾವಗಳನ್ನು ಕೊನೆಗೊಳಿಸಲು ಏಕೆ ಸಾಧ್ಯವಾಗಲಾರದು. ಅನೇಕ ವಿವಾದಗಳು ಮಿಥ್ಯ ಅಹಂಭಾವದ ಕಾರಣದಿಂದ ತಲೆದೋರುತ್ತವೆ. ಮನಸ್ತಾಪಗಳು ಜಾರಿಗೊಳ್ಳುತ್ತವೆ. ಕೆಲವು ತರುಣರು ನನಗೆ ಬರೆಯುತ್ತಾರೆ, ನಾವು ನಮ್ಮ ಸಂಬಂಧಿಕರೊಂದಿಗೆ ವಿವಾಹ ಸಂಬಂಧ ಸ್ಥಾಪಿಸಲು ಬಯಸುತ್ತೇವೆ. ಆದರೆ ಕೌಟುಂಬಿಕ ವಿರೋಧಗಳ ಕಾರಣದಿಂದ, ಹಿರಿಯರ ಕಾರಣದಿಂದ ವಿವಾಹ ಸಂಬಂಧ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಅಂತಹ ಜನರಿಗೆ ಬುದ್ಧಿ ಬರಬೇಕು. ಅಲ್ಲಾಹನು ಪ್ರೀತಿ, ವಾತ್ಸಲ್ಯಗಳ ಐಕ್ಯದ ಉಪದೇಶ ನೀಡಿ ಒಂದೇ ಸಮುದಾಯವನ್ನಾಗಿ ಮಾಡಿದ್ದಾನೆ. ನಾವು ಒಂದು ಸಮುದಾಯವಾಗಿ ಜೀವಿಸಬೇಕು. ಮಿಥ್ಯವಾದ ಅಹಂಭಾವದಲ್ಲಿ ನಾವು ಪುನಃ ಮುಳುಗಬಾರದು. ಅಲ್ಲಾಹನು ಎಲ್ಲರಿಗೂ ವಿವೇಕ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 24-08-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon